ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560001**

DPI-CPI0SATS(ATN)/1/2024 /E- 1334733 ದಿನಾಂಕ:11-07-2024

## ಜ್ಞಾಪನ

**ವಿಷಯ** : LKG,UKG ಮತ್ತು 1ನೇ ತರಗತಿ ಮಕ್ಕಳ ಶಾಲಾ ಪ್ರವೇಶ ದಾಖಲಾತಿಗೆ ಅರ್ಹ ಗರಿಷ್ಠ ವಯೋಮಾನವನ್ನು ಪರಿಷ್ಕರಿಸಿರುವ ಬಗ್ಗೆ.

**ಉಲ್ಲೇಖ** : ಸರ್ಕಾರದ ಆದೇಶ ಸಂಖ್ಯೆ : ಇಪಿ 100 ಪಿಜಿಸಿ 2024 ಬೆಂಗಳೂರು ದಿನಾಂಕ : 26ನೇ ಜೂನ್ 2024.

***

ವಿಷಯಕ್ಕೆ ಸಂಬಂಧಿಸಿದಂತೆ, LKG, UKG ಮತ್ತು 1ನೇ ತರಗತಿ ಮಕ್ಕಳ ಶಾಲಾ ಪ್ರವೇಶ ದಾಖಲಾತಿಗೆ ಅರ್ಹ ಗರಿಷ್ಠ ವಯೋಮಾನವನ್ನು ಪರಿಷ್ಕರಿಸಿರುವ ಕುರಿತಾದ ಸರ್ಕಾರದ ಉಲ್ಲೇಖಿತ ಆದೇಶವನ್ನು ನಿಯಮಾನುಸಾರ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿ, ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಮತ್ತು ರಾಜ್ಯದ ಎಲ್ಲಾ ಶಾಲಾ ಮುಖ್ಯಸ್ಥರಿಗೆ ಕಳುಹಿಸಿದ್ದು, ಅದರಂತೆ ಕ್ರಮವಹಿಸಲು ತಿಳಿಸಿದೆ.

(ಮಾನ್ಯ ಆಯುಕ್ತರ ಆದೇಶಾನುಸಾರ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆರವರಿಗೆ ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರ ಮುಖಾಂತರ ಸೂಕ್ತ ಕ್ರಮಕ್ಕಾಗಿ.
3. ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ/SATS ಇವರಿಗೆ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಹಾಗೂ ತಂತ್ರಾಂಶದಲ್ಲಿ ಇಂದೀಕರಿಸಲು .
4. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರಿಗಳಿಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ

**ಪ್ರತಿ.**

1. ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು ಕಲಬುರಗಿ/ಧಾರವಾಡ
4. ನಿರ್ದೇಶಕರು. ಪ್ರೌಢ ಶಾಲಾ ವಿಬಾಗ, ಆಯುಕ್ತರ ಕಛೇರಿ ಬೆಂಗಳೂರು.
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬನಶಂಕರಿ. ಬೆಂಗಳೂರು.
6. ಹಿರಿಯ ಸಹಾಯಕ ನಿರ್ದೇಶಕರು E-Governance ಮತ್ತು SATS ಶಾಖೆ
7. ಕಛೇರಿ ಪ್ರತಿ

28/6/24

40
28/6/24

## ಕರ್ನಾಟಕ ಸರ್ಕಾರದ ನಡವಳಿಗಳು

***ವಿಷಯ:*** LKG, UKG ಮತ್ತು 1ನೇ ತರಗತಿಗೆ ಮಕ್ಕಳ ಶಾಲಾ ಪ್ರವೇಶ ದಾಖಲಾತಿಗೆ ಅರ್ಹ ಗರಿಷ್ಟ ವಯೋಮಾನವನ್ನು ಪರಿಷ್ಕರಿಸುವ ಬಗ್ಗೆ.

***ಓದಲಾಗಿದೆ:***

1. ಸರ್ಕಾರದ ಆದೇಶ ಸಂಖ್ಯೆ:ಇಪಿ 260 ಪಿಜಿಸಿ 2021, ದಿನಾಂಕ:26.07.2022.
2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಪಿ 387 ಪಿಜಿಸಿ 2022, ದಿನಾಂಕ:15.11.2022.
3. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: DPI-CPI OSATS (ATN) /1/2024, E-1334733 (ADM2 (2), ದಿನಾಂಕ:01.04.2024.

Adm(2)
28/06/24

* * *

***ಪ್ರಸ್ತಾವನೆ:***

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ ಶಿಕ್ಷಣ ಹಕ್ಕು ಕಾಯ್ದೆ-2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012ರಂತೆ ಶೈಕ್ಷಣಿಕ ವರ್ಷದ ಜೂನ್ ಒಂದನೇ ತಾರೀಖಿಗೆ ಕಡ್ಡಾಯವಾಗಿ 06 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಪಿ 260 ಪಿಜಿಸಿ 2021, ದಿನಾಂಕ:26.07.2022ರ ಆದೇಶದಲ್ಲಿ ಜೂನ್ ಒಂದನೇ ತಾರೀಖಿಗೆ ಕಡ್ಡಾಯವಾಗಿ 06 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ನಿಗಧಿಪಡಿಸಲಾಗಿರುವುದನ್ನು 2025-26ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ತಿದ್ದುಪಡಿ ಮಾಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3)ರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ LKG, UKG ಮತ್ತು 01ನೇ ತರಗತಿ ಪ್ರವೇಶಕ್ಕೆ ಈಗಾಗಲೇ ದಾಖಲಾತಿಗೆ ಕನಿಷ್ಟ ಅರ್ಹ ವಯೋಮಾನವನ್ನು ಪರಿಷ್ಕರಿಸಿ ನಿಗಧಿಪಡಿಸಲಾಗಿದೆ. ಆದರೆ ಗರಿಷ್ಟ ವಯೋಮಾನಗಳನ್ನು ಪರಿಷ್ಕರಿಸಿರುವುದಿಲ್ಲ. ಗರಿಷ್ಠ ವಯೋಮಿತಿಯನ್ನು



Generated from eOffice by PRASANNA, EDU-CPI-ADM2-SDA(PSG), SECOND DIVISION ASSISTANT, COMMISSIONER OFFICE OF PUBLIC INSTRUCTION on 16/07/2024 03:24 PM

ಪರಿಷ್ಕರಿಸುವುದರಿಂದ ಡ್ರಾಪ್ ಔಟ್ ಮಕ್ಕಳ ಸಂಖ್ಯೆಯನ್ನು ಸಹ ತಗ್ಗಿಸಬಹುದಾಗಿರುವ ಪ್ರಯುಕ್ತ LKG, UKG ಮತ್ತು 01ನೇ ತರಗತಿಗಳಿಗೆ ಈಗಾಗಲೇ ಮಕ್ಕಳ ದಾಖಲಾತಿಗಾಗಿ ಕನಿಷ್ಠ ವಯೋಮಿತಿಯನ್ನು ಪರಿಷ್ಕರಿಸಿ ನಿಗಧಿಪಡಿಸಿರುವಂತೆ ಗರಿಷ್ಠ ವಯೋಮಾನದ ಮಾನದಂಡವನ್ನು ಸಡಿಲಿಸಿ ಪರಿಷ್ಕರಿಸುವ ಅಗತ್ಯವಿದ್ದು, ಈ ಕೆಳಕಂಡಂತೆ ಪರಿಷ್ಕರಿಸಲು ಕೋರಿರುತ್ತಾರೆ.

| ತರಗತಿ | ಪ್ರಸ್ತುತ ಇರುವ ಆದೇಶ (SATS) | ಪರಿಷ್ಕರಣೆಗೆ ಕೋರಿರುವ ಅಂಶಗಳು | | | | |
|---|---|---|---|---|---|---|
| | | ಅನ್ವಯವಾಗುವ ವರ್ಷ | ಕನಿಷ್ಠ ವಯೋಮಿತಿ | ಅನ್ವಯವಾಗುವ ವರ್ಷ | ಗರಿಷ್ಠ ವಯೋಮಿತಿ | ಅನ್ವಯವಾಗುವ ವರ್ಷ |
| LKG | ಕನಿಷ್ಠ 4 ರಿಂದ ಗರಿಷ್ಠ 5 ವರ್ಷಗಳು | 2023-24 | 4 ವರ್ಷ | 2023-24 | 6 ವರ್ಷ | 2023-24 |
| UKG | ಕನಿಷ್ಠ 4 ರಿಂದ ಗರಿಷ್ಠ 5 ವರ್ಷಗಳು | 2024-25 | 5 ವರ್ಷ | 2024-25 | 7 ವರ್ಷ | 2023-24 |
| 1ನೇ ತರಗತಿ | ಕನಿಷ್ಠ 4 ರಿಂದ ಗರಿಷ್ಠ 5 ವರ್ಷಗಳು | 2025-26 | 6 ವರ್ಷ | 2025-26 | 8 ವರ್ಷ | 2023-24 |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 100 ಪಿಜಿಸಿ 2024,**

**ಬೆಂಗಳೂರು, ದಿನಾಂಕ: 26ನೇ ಜೂನ್ 2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, LKG, UKG ಮತ್ತು 01ನೇ ತರಗತಿ ಪ್ರವೇಶಕ್ಕೆ ಗರಿಷ್ಟ ವಯೋಮಾನಗಳನ್ನು 2023-24ನೇ ಸಾಲಿನಿಂದ ಅನ್ವಯವಾಗುವಂತೆ ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಿದೆ.

| ತರಗತಿ | ಪ್ರಸ್ತುತ ಇರುವ ಆದೇಶ (SATS) | ಪರಿಷ್ಕರಣೆಗೆ ಕೋರಿರುವ ಅಂಶಗಳು | | | | |
|---|---|---|---|---|---|---|
| | | ಅನ್ವಯವಾಗುವ ವರ್ಷ | ಕನಿಷ್ಟ ವಯೋಮಿತಿ | ಅನ್ವಯವಾಗುವ ವರ್ಷ | ಗರಿಷ್ಠ ವಯೋಮಿತಿ | ಅನ್ವಯವಾಗುವ ವರ್ಷ |
| LKG | ಕನಿಷ್ಠ 4 ರಿಂದ ಗರಿಷ್ಠ 5 ವರ್ಷಗಳು | 2023-24 | 4 ವರ್ಷ | 2023-24 | 6 ವರ್ಷ | 2023-24 |



Generated from eOffice by PRASANNA, EDU-CPI-ADM2-SDA(PSG), SECOND DIVISION ASSISTANT, COMMISSIONER OFFICE OF PUBLIC INSTRUCTION on 16/07/2024 03:24 PM

| | | | | | | |
|---|---|---|---|---|---|---|
| UKG | ಕನಿಷ್ಟ 4 ರಿಂದ ಗರಿಷ್ಟ 5 ವರ್ಷಗಳು | 2024-25 | 5 ವರ್ಷ | 2024-25 | 7 ವರ್ಷ | 2023-24 |
| 1ನೇ ತರಗತಿ | ಕನಿಷ್ಟ 4 ರಿಂದ ಗರಿಷ್ಟ 5 ವರ್ಷಗಳು | 2025-26 | 6 ವರ್ಷ | 2025-26 | 8 ವರ್ಷ | 2023-24 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
26/6/2024
**(ಮಹಾಂತಯ್ಯ ಎಸ್. ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪ್ರಾಥಮಿಕ)

**ಇವರಿಗೆ:**

1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
3. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
4. ನಿರ್ದೇಶಕರು, (ಪ್ರಾಥಮಿಕ / ಪ್ರೌಢ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
5. ಶಾಲಾ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ( ಆಯುಕ್ತರು/ ಅಪರ ಆಯುಕ್ತರ ಮೂಲಕ)
6. ಶಾಖಾರಕ್ಷಾ, ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿ.